(ಸಾಕ್ಷಿಯನ್ನು ದಿನಾಂಕ: 31.10.2023 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

**<u>ಪಾಟೀ ಸವಾಲುಃ ಶ್ರೀ ಸಿ.ಜಿ., ಎದುರುದಾರರ ಪರ ವಕೀಲರಿಂದಃ</u>**

ಮೂಲ ದಾವೆ ಸಂಖ್ಯೆ 426/2020 ದಾವೆಯ ಪ್ರತಿ ವಿಚಾರಣೆಗೂ ನಾನು ನ್ಯಾಯಾಲಯಕ್ಕೆ ಬಂದಿರುತ್ತೇನೆ ಎಂದರೆ ಸರಿ. 1 ನೇ ಎದುರುದಾರರಾದ ಗೌಸ್ ಪೀರ್ ರವರು ಕರೀಮ್ ಪೀರ್ ರವರ ವಿರುದ್ಧ ಅಸಲು ದಾವೆ ಸಂಖ್ಯೆ 103/2022 ರಂತೆ ಭಾಗಾಂಶ ಕೋರಿ ದಾಖಲಿಸಿದ ದಾವೆ ಕುರಿತು ನನಗೆ ಗೊತ್ತಿರುವುದಿಲ್ಲ. ಅಸಲು ದಾವೆ ಸಂಖ್ಯೆ 103/2022 ರಲ್ಲಿ ನನಗೂ ಭಾಗಾಂಶ ಬರಬೇಕೆಂದು ಕೋರಿ ನಾನು ಸಿ.ಪಿ.ಸಿ ಕ್ರಮಾದೇಶ 1 ನಿಯಮ 10 ರ ಅಡಿಯಲ್ಲಿ ಪಕ್ಷಗಾರನಾಗಲು ಮಧ್ಯಂತರ ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ನನಗೆ ಗೊತ್ತಿರುವುದಿಲ್ಲ. ನಾನು ಅಸಲು ದಾವೆ ಸಂಖ್ಯೆ 103/2022 ರಲ್ಲಿ ಮೇಲಿನಂತೆ ಮಧ್ಯಂತರ ಅರ್ಜಿ ಸಲ್ಲಿಸಿದ್ದರೂ ಸಹ ಈ ಕುರಿತು ನನಗೆ ಗೊತ್ತಿರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನೂರ್ ಆಸಿಯಾರವರು ನನ್ನ ವಿರುದ್ಧ ಮೂಲ ದಾವೆ ಸಂಖ್ಯೆ 579/2021 ರಂತೆ ದಾವೆ ದಾಖಲಿಸಿದ್ದು ಸದರಿ ದಾವೆ ಸಂಬಂಧವೂ ಸಹ ನಾನು ನ್ಯಾಯಾಲಯಕ್ಕೆ ಹಾಜರಾಗುತ್ತಿರುತ್ತೇನೆ ಎಂದರೆ ಸರಿ. ನಾನು ಮೇಲೆ ನಮೂದಿಸಿದ ದಾವೆಗಳ ಸಂಬಂಧ ನ್ಯಾಯಾಲಯಕ್ಕೆ ಹಾಜರಾಗುತ್ತಿದ್ದರೂ ಸಹ ಪ್ರಸ್ತುತ ಮೇಲ್ಮನವಿಯನ್ನು ಕಾಲಪರಿಮಿತಿಯಲ್ಲಿ ಸಲ್ಲಿಸಿರುವುದಿಲ್ಲ ಎಂದರೆ ನನ್ನ ತಮ್ಮನಿಗೆ ಆರೋಗ್ಯದ ಸಮಸ್ಯೆ ಇದ್ದ ಕಾರಣ ನಾವು ನ್ಯಾಯಾಲಯಕ್ಕೆ ಬಂದಿರುವುದಿಲ್ಲ ಎಂದು ನುಡಿಯುತ್ತೇನೆ. ನನ್ನ ತಮ್ಮನಿಗೆ ಏನು ಆರೋಗ್ಯ ಸಮಸ್ಯೆಯಿತ್ತು ಎಂದು ಪ್ರಸ್ತುತ ಮೇಲ್ಮನವಿಯಲ್ಲಿ ಸಲ್ಲಿಸಿದ ಪ್ರಮಾಣ ಪತ್ರದಲ್ಲಿ ನಾನು ತಿಳಿಸಿರುವುದಿಲ್ಲ. ನನ್ನ ತಮ್ಮನ ಅನಾರೋಗ್ಯದ ಕುರಿತು ವೈದ್ಯಕೀಯ ದಾಖಲೆಗಳನ್ನು ನ್ಯಾಯಾಲಯದಲ್ಲಿ ಸಲ್ಲಿಸಿರುವುದಿಲ್ಲ. ನನ್ನ ತಮ್ಮನಿಗೆ ಯಾವುದೇ ಆರೋಗ್ಯದ ಸಮಸ್ಯೆ ಇರಲಿಲ್ಲ, ನಾನು ಪ್ರಸ್ತುತ ಮೇಲ್ಮನವಿಯನ್ನು ನನ್ನ ತಮ್ಮನ ಅನಾರೋಗ್ಯದ ನಿಮಿತ್ತ ತಡವಾಗಿ ಸಲ್ಲಿಸಿರುತ್ತೇನೆ ಎಂದು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ

ಸರಿಯಲ್ಲ.

**<u>ಮರು ವಿಚಾರಣೆಃ ಶ್ರೀಮತಿ ಜೆ.ಹೆಚ್., ಮೇಲ್ಮನವಿದಾರರ ಪರ ವಕೀಲರಿಂದಃ</u>**

ನನ್ನ ತಮ್ಮನಿಗೆ ನಾಟಿ ವೈದ್ಯರ ಬಳಿ ಚಿಕಿತ್ಸೆ ಕೊಡಿಸಿದ್ದರಿಂದ ಯಾವುದೇ ವೈದ್ಯಕೀಯ ದಾಖಲೆಗಳನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಲು ಸಾಧ್ಯವಾಗಿರುವುದಿಲ್ಲ.

**<u>ಪಾಟೀ ಸವಾಲುಃ ಶ್ರೀ ಸಿ.ಜಿ., ಎದುರುದಾರರ ಪರ ವಕೀಲರಿಂದಃ</u>**

ನನ್ನ ತಮ್ಮಗೆ ನಾಟಿ ವೈದ್ಯರ ಬಳಿ ಚಿಕಿತ್ಸೆ ಕೊಡಿಸಿರುವ ಬಗ್ಗೆ ನ್ಯಾಯಾಲಯಕ್ಕೆ ಸಲ್ಲಿಸಿದ ಪ್ರಮಾಣ ಪತ್ರದಲ್ಲಿ ಹೇಳಿರುವುದಿಲ್ಲ. ಯಾವ ನಾಟಿ ವೈದ್ಯರ ಬಳಿ, ಯಾವ ದಿನದಂದು ಮತ್ತು ಎಲ್ಲಿ ಚಿಕಿತ್ಸೆ ಪಡೆಯಲಾಗಿತ್ತು ಎಂದು ನನಗೆ ಗೊತ್ತಿರುವುದಿಲ್ಲ. ನಾನು ನನ್ನ ತಮ್ಮನಿಗೆ ಯಾವುದೇ ನಾಟಿ ವೈದ್ಯರ ಬಳಿ ಚಿಕಿತ್ಸೆ ಕೊಡಿಸಿರುವುದಿಲ್ಲ, ನಾನು ಆ ಸಮಯದಲ್ಲಿ ಊರಿನಲ್ಲಿಯೇ ಇರುತ್ತೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಇದೆ

*ಸಹಿ/-*
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ,
ಕುಣಿಗಲ್.